# ಮಕ್ಕಳ ಮನಸ್ಸೇಕೆ ಕದಡಿದೆ?

ಬಾಳೆಹಣ್ಣಿನ ಸಿಪ್ಪೆ ಸುಲಿದಷ್ಟು ಸಲೀಸಾಗಿ ಮಕ್ಕಳು ಮೊಬೈಲ್ ಬಳಸುವುದನ್ನು ನೋಡಿದರೆ ಅವರ ಡಿಎನ್‌ಎಯಲ್ಲೇ ಮೊಬೈಲ್ ತಂತ್ರಜ್ಞಾನ ಬೆರೆತಿರುವಂತೆ ಕಾಣಿಸುತ್ತಿದೆ. ಮೊಬೈಲ್ ಗೇಮ್‌ಗಳ ವ್ಯಸನ ಕೊಲೆಗಳಿಗೆ, ಆತ್ಮಹತ್ಯೆಗಳಿಗೆ, ಖಿನ್ನತೆಗೆ ದಾರಿಮಾಡಿಕೊಡುತ್ತಿದೆ. ಅಳುವ ಮಕ್ಕಳ ಕೈಗೆ ಪೆಪ್ಪರುಮಿಂಟು ಕೊಟ್ಟಂತೆ ಮೊಬೈಲ್ ಕೊಡುವ ಅಪ್ಪ–ಅಮ್ಮಂದಿರು, ಪಾಲನೆ ಪೋಷಣೆಯ ಸುಖದುಃಖಗಳೊಂದಿಗೆ ಅಂತರ ಕಾಪಾಡಿಕೊಂಡಿರುವಂತಿದೆ. ಶಾಲೆಗಳಲ್ಲಿ ಮಾರ್ಗದರ್ಶಕರಾಗಿ ಮಕ್ಕಳನ್ನು ಪ್ರಭಾವಿಸಬೇಕಿದ್ದ ಶಿಕ್ಷಕರು, ಎಳೆಯ ಮನಸ್ಸುಗಳನ್ನು ಯಾಂತ್ರಿಕವಾಗಿಸುವುದಕ್ಕೆ ತಮ್ಮೆಲ್ಲ ಪ್ರತಿಭೆ–ಶ್ರಮ ವಿನಿಯೋಗಿಸುತ್ತಿದ್ದಾರೆ. ಇದೆಲ್ಲದರ ಪರಿಣಾಮ, ನಂದನದಂತೆ ಇರಬೇಕಿದ್ದ ಮಕ್ಕಳ ಮನಸ್ಸುಗಳಲ್ಲಿ ಚಂಡಮಾರುತದ ಕೋಲಾಹಲ. ಕಂದಮ್ಮಗಳ ಮನಸ್ಸುಗಳಲ್ಲಿ ಹಿಂಸೆಯ ಹಾಲಾಹಲ. ನಾವು ಎಚ್ಚತ್ತುಕೊಳ್ಳುವುದು ಯಾವಾಗ?

■ ಎಂ. ಶ್ರೀಧರಮೂರ್ತಿ

ನಿರೂಪಣೆ: ವಿಶಾಖ ಎನ್.

